August 12, 2026

To,

National Stock Exchange of India Limited,
Exchange Plaza, C-1, Block G,
Bandra Kurla Complex, Bandra (E),
Mumbai – 400 051
NSE Scrip Symbol: **AEQUS**

BSE Limited,
20th Floor, P.J. Towers,
Dalal Street,
Mumbai – 400 001
BSE Scrip Code: **544634**

Subject: Newspaper Publication – Notice to the shareholders regarding the 26th Annual General Meeting of Aequs Limited (the "Company") to be held on September 04, 2026 at 4:00 P.M. (IST) through Video Conferencing/other Audio-Visual Means

Dear Sir / Madam,

In terms of the Securities and Exchange Board of India (Listing Obligations and Disclosure Requirements) Regulations, 2015 ("SEBI Listing Regulations") read with the circulars issued by the Ministry of Corporate Affairs and the Securities and Exchange Board of India, please find enclosed a copy of the newspaper advertisement of the notice to the shareholders, published on August 12, 2026, in Financial Express (English edition) and Vishwavani (Kannada edition), regarding the 26th Annual General Meeting of the Company, scheduled to be held on September 04, 2026, at 4:00 P.M. (IST) through Video Conferencing/Other Audio-Visual Means.

The above announcement will also be made available on the website of the Company and can be accessed using the link i.e. **https://www.aequs.com/investor/**

Thanking You,

For Aequs Limited

RAVI MALLIKARJUN HUGAR

Digitally signed by RAVI MALLIKARJUN HUGAR
Date: 2026.08.12 14:33:39 +05'30'

Ravi Mallikarjun Hugar
Company Secretary and Compliance Officer
Membership Number: A20823

Encl.: as above

LOST DOCUMENT NOTICE

I, Sri. Palleri Ramadorai Reddy, S/o Late Shanmugam Reddy Palleri, hereby inform the general public that I have **lost the original Registered Sale Deed while travelling from Battarahalli to KR Puram, Bengaluru.**

Document Details: Document Type: Original Registered Sale Deed, Registered in the name of Sri. Palleri Ramadorai Reddy. Registration Date: 25/10/2021. Document No.: 6530. Book No.: BGR-1-06530-2021-22. Registered at The Sub-Registrar Office, Jayanagar, Bengaluru.Despite diligent search, the document could not be traced. Any person who finds the above document or has any information regarding its whereabouts is requested to contact the undersigned immediately.

Contact:Sri. Palleri Ramadorai Reddy
Mobile: 8919137482

The public is hereby cautioned not to misuse the said document. If found, kindly call to the above contact number.

Thank You,
Sri. Palleri Ramadorai Reddy

Dated: 09.08.2026
Bangalore.

BOSCH — E-Auction 14th AUG 2026

BOSCH LIMITED, ADUGODI PLANT

Material : Broken & Damaged Chairs, Scrap Glass / Used Batteries / Electrical Items (KSPSB Certificate Holders Only)

Inspection & Submission Date: 13th AUG 2026 SYNISE e-Sale & Sourcing

Contact : Naveen GH - 9880171503, naveengh@synise.com | www.synise.com

Form No. INC-26

{Pursuant to Rule 30 of the Companies (Incorporation) Rules, 2014}

Before the Central Government, Regional Director, South Western Region Directorate, Bangalore

In the matter of sub-section (4) of Section 13 of Companies Act, 2013 and clause (a) of sub-rule (5) of Rule 30 of the Companies Incorporation Rules, 2014

AND

In the matter of
ACI MECHANICAL INDIA PRIVATE LIMITED
(CIN: U47594KA2026PTC214376)
having its Registered Office at
No. 3 Leela, 5 th Cross, 5 Main Road Jayamahal, Benson Town, Bangalore, Bangalore North, Karnataka, India, 560046
.........Applicant Company / Petitioner

NOTICE is hereby given to the General Public that the company proposes to make an application to the Central Government under Section 13(4) of the Companies Act, 2013 seeking confirmation of alteration of the Memorandum of Association of the Company in terms of the special resolution passed at the Extra Ordinary General Meeting held on **11th July, 2026** to enable the company to change its Registered Office from **"State of Karnataka"** to the **"State of Telangana".**

Any person whose interest is likely to be affected by the proposed change of the registered office of the company may deliver either on the **MCA-21 portal (www.mca.gov.in) by filing investor complaint form** or cause to be delivered or send by speed post of his /her objections supported by an affidavit stating the nature of his / her interest and grounds of opposition to the **Regional Director, South Western Region Directorate, 'E' Wing, 2nd Floor, Kendriya Sadana, Kormangala, Bangalore-560034, Karnataka** within fourteen days (14) from the date of publication of this notice with a copy to the applicant Company at its Registered Office at the address mentioned below:-

No. 3 Leela, 5 th Cross, 5 Main Road Jayamahal, Benson Town, Bangalore, Bangalore North, Karnataka, India, 560046

For & on behalf of
ACI MECHANICAL INDIA PVT. LTD.
Sd/-
BRIAN LOUIS WOLFORD
(DIRECTOR)
DIN : 11490512

Date : 12.08.2026
Place : Bangalore

ROYAL ORCHID HOTELS LIMITED

Registered Office : No.1, Golf Avenue, Adjoining KGA Golf Course, Airport Road, Bengaluru - 560 008.INDIA.
T: +91 80 25205566, F: +91 80 25203366, www.royalorchidhotels.com
CIN: L55101KA1986PLC007392

STATEMENT OF UN-AUDITED STANDALONE & CONSOLIDATED FINANCIAL RESULTS FOR FIRST QUARTER ENDED JUNE 30, 2026

The Board of Directors of the Company, at the meeting held on **August 11, 2026,** approved the **Unaudited Standalone & Consolidated Financial Results for First Quarter ended June 30, 2026.**

The Unaudited Financial Results have been hosted on the Company's Website at **https://www.royalorchidhotels.com/investors** and can also be accessed by scanning the below QR Code.

For and on behalf of the Board of Directors
C.K. Baljee
Managing Director.
DIN: 00081844

Place: Bengaluru
Date : 12th August 2026

EMBASSY — SQUADRON DEVELOPERS LIMITED

(formerly known as Squadron Developers Private Limited)
Registered office : 14th Floor, Pinnacle Tower, Embassy One, 8, Bellary Road, Ganganagar, R T Nagar, Bangalore, Karnataka, India, 560032
CIN : U70100KA2022PLC158620 | Tel. No: 080 69354859 | Email: secretarialteam@embassyindia.com

Statement of Unaudited financial results for the quarter ended June 30, 2026

(Amount in ₹ thousands unless otherwise stated)

Sl No	Particulars	Quarter ended 3 months ended June 30, 2026	Quarter ended 3 months ended June 30, 2025	Year Ended March 31, 2026
		Unaudited	Unaudited	Audited
1	Total Income from Operations	6,072.15	-	10,945.82
2	Net (Loss) / Profit for the year/period (before Tax, Exceptional and/or Extraordinary items)	(20,195.54)	(109.39)	5,456.10
3	Net (Loss) /Profit for the year/period before Tax (after Exceptional and/or Extraordinary items)	(20,195.54)	(109.39)	5,456.10
4	Net (Loss) / Profit for the year/period after Tax (after Exceptional and/or Extraordinary items)	(20,195.54)	(109.39)	5,456.10
5	Total Comprehensive Income for the year/period [Comprising Profit / (Loss) for the period (after tax) and Other Comprehensive Income (after tax)]	(20,195.54)	(109.39)	5,456.10
6	Earnings per Share (face value of Rs. 10/- each)			
	-Basic (Amount in Rs.)	(2,019.55)	(10.94)	545.61
	-Diluted (Amount in Rs.)	(2,019.55)	(10.94)	545.61
7	Paid-up equity share capital (face value of Rs. 10 per equity share)	100.00	100.00	100.00

For Squadron Developers Limited
(formerly known as Squadron Developers Private Limited)
Sd/-
Swarna Ramesh Malharikar.
Director
DIN:11022934

Place : Bengaluru
Date : 10.08.2026

SOURCE NATURAL FOODS AND HERBAL SUPPLEMENTS LIMITED

Regd. Off : 201, II Floor, #54/46, 39th A Cross, 11th Main Road, Jayanagar 4th T Block, Bangalore – 560041
CIN: L24231KA1995PLC101742
Ph: 080-26087727/26 Fax: 080 22449505 Email: info@source-natural.com Website: www.source-natural.com

STATEMENT OF UNAUDITED STANDALONE AND CONSOLIDATED FINANCIAL RESULTS FOR THE QUARTER ENDED JUNE 30, 2026

The Board of Directors of the Company, based on the recommendation of the Audit Committee, at its meeting held on Monday, August 10, 2026, approved the Unaudited Standalone and Consolidated Financial Results of the Company for the quarter ended June 30, 2026.

The aforesaid Financial Results, along with the Limited Review Reports thereon, are available on the website of the Company at https://www.source-natural.com/pages/investor-information and on the website of BSE Limited at www.bseindia.com and can also be accessed by scanning the QR Code given below:

Note:The above intimation is in accordance with Regulation 33 read with Regulation 47(1) of the SEBI (Listing Obligations and Disclosure Requirements) Regulations, 2015

By Order of the Board
For **SOURCE NATURAL FOODS AND HERBAL SUPPLEMENTS LIMITED**
Sd/-
Arvind Varchaswi N
Managing Director
DIN: 00143713

Place : Bangalore
Date : 10-08-2026

Embassy Property Developments Private Limited

Registered office: No 150, Embassy Point, 1st Floor, Infantry Road, Bangalore-560001
CIN: U85110KA1996PTC020897
Website - www.embassygroup.com

Statement of unaudited standalone financial results for the quarter ended June 30, 2026

(Rs. in Lakhs, except as otherwise stated)

Sl No	Particulars	Quarter ended 30 JUNE 2026	Quarter ended 30 JUNE 2025	Previous Year ended 31 MARCH 2026
		Un Audited	Un Audited	Audited
1	Total income from operations	81,270.30	37,626.70	1,55,127.50
2	Profit / (loss) from operations before tax and exceptional items	64,174.20	9,799.90	66,044.50
3	Profit / (loss) from ordinary activities before tax after exceptional items	64,174.20	9 ,799.90	65,427.50
4	Net profit / (loss) from ordinary activities after tax	58,345.60	9 ,799.90	66,179.40
5	Total comprehensive income	1,02,259.00	25,981.60	(81,696.90)
6	Paid-up equity share capital (Face value Rs 10 each)	1,10,437.60	110,437.60	110,437.60
7	Reserves excluding revaluation reserves	-	-	2,17,729.00
8	Networth	4,35,827.80	4,35,860.30	3,28,166.60
9	Securities premium account	115.90	115.90	115.90
10	Paid-up debt capital	1,36,598.78	1,36,598.78	1,35,598.78
11	Debt equity ratio	0.82	1.09	1.34
12	Earnings / (loss) per share (EPS)			
	-basic and diluted (Rs)	5.28	0.89	5.99
13	Debenture redemption reserve	-	-	-
14	Debt service coverage ratio	0.64	0.85	1.47
15	Interest service coverage ratio	5.65	2.03	2.17

Notes to the financial results:

1. The above is an extract of the detailed format of yearly financial results filed with the Stock Exchanges under Regulation 52 of the SEBI (Listing and Other Disclosure Requirements) Regulations, 2015. The full format of the yearly results are available on the websites of the Stock Exchange(s).
2. For the items referred in sub-clauses (a), (b), (d) and (e) of the Regulation 52 (4) of the SEBI (Listing and Other Disclosure Requirements) Regulations, 2015, the pertinent disclosures have been made to the Stock Exchange(s)

For and on behalf of the Board of Directors
Sd/-
Aditya Virwani
Director
DIN - 06480521

Place : Bengaluru
Date : 10.08.2026

Re: High Court, O.OC.J.
Arbitration Petition
No. 187 of 2026
ICICI Home Finance Company Limited and Anr
Versus
Mr. Deepak Kumar and Anr.

VBD/2026/
7th August, 2026
1. Mr. Deepak Kumar,
ITO Ward No.1, Godak Belgaum, Gokak, Karnataka- 591307
2. Ms. Neetu Kumari,
H No. 444, Mahra, 157,
2, Sonepat, Ghaziabad, Uttar Pradesh- 201204
3. Mr. Mundresh Kumari,
332, Brij Vihar Mrudnagar, Ghaziabad, Uttar Pradesh- 201204

Sir/Madam,
We are concerned for our clients ICICI Home Finance Company Limited, the Applicant in the above matter.
Our client has initiated aforesaid Arbitral reference for recovery of its outstanding dues and have filed the aforesaid Application for appointment of the Learned Sole Arbitrator in view of the disputes and differences arisen between our clients and You, and on the grounds as more particularly mentioned therein.
Despite serving the papers and proceedings and notices from time to time, you have opted not to attend the Arbitration Proceedings. Please take note that the aforesaid matter will be listed on board on 21.08.2026 at 11:00 A.M. or any time thereafter before His Lordship Mr. Justice Amit Borkar when we will press for reefs in terms of the aforesaid Application when you may remain present if you so desire Please also take note that in the event you fail to cause appearance, we will press for directions in your absence.

Yours faithfully,
M/s. V. Deshpande & Co.,
Advocate for the Claimant
111, 1st Floor, Commerce House,
140 Nagindas Master Road,
Fort, Mumbai - 400 023
Email: vinaydeshpande21@gmail.com
Phone No: 022 2269 4285 / 89

AEQUS

ecosystems of efficiency

Aequs Limited

(Formerly known as Aequs Private Limited)
CIN: L80302KA2000PLC026760
Registered Office: Aequs Tower, No. 55, Whitefield Main Road, Mahadevapura Post, Bengaluru - 560048, Karnataka, India.
Tel: + 91 080 61348000, E-mail: investor.relations@aequs.com, Website: www.aequs.com

NOTICE OF THE 26TH ANNUAL GENERAL MEETING AND REMOTE E-VOTING INFORMATION

(A) ANNUAL GENERAL MEETING ("AGM")

Notice is hereby given that the 26th Annual General Meeting (AGM) of the members of Aequs Limited ("Company") will be held on Friday, September 04, 2026 at 4:00 PM (IST) through Video Conferencing ("VC") / Other Audio-Visual Means ("OAVM") only, to transact the businesses set forth in the AGM notice pursuant to circulars issued by the Ministry of Corporate Affairs ("**MCA**") and Securities and Exchange Board of India ("**SEBI**"), which allow the companies to hold AGM through VC/OAVM.

In terms of the said Circulars, the AGM Notice along with the Audited Balance Sheet as at March 31, 2026, Audited Statement of Profit & Loss, Cash Flow Statement for the year ended March 31, 2026, together with the Reports of the Directors and Auditors thereon will be sent only to the members whose E-mail Ids are registered with the Company/Depository Participant(s)/ KFin Technologies Limited ("KFin"), the Registrar and Share Transfer Agent of the Company on Friday, August 07, 2026. The requirement of sending physical copies of the Notice of AGM has been dispensed with vide MCA Circulars and the SEBI Circulars. A letter providing web-link including exact path, for accessing the Annual Report will be sent to those members who have not registered their email ids.

The AGM Notice and Annual Report of the Company for the financial year 2025-26 will also be available on the Company's website at **https://www.aequs.com/investor/** and on the websites of the Stock Exchanges where the shares of the Company have been listed viz., **www.nseindia.com** and **www.bseindia.com** and on website of KFin (**https://evoting.kfintech.com**). Members, including those who have not registered their E-mail addresses with Company/Depository Participant(s), can download the AGM Notice and Annual Report from any of the said websites.

The members whose E-mail address is not registered with the KFin/Depository Participant(s), are required to visit the link: **https://evoting.kfintech.com** for registration of E-mail address and to receive AGM Notice, Annual Report and e-voting user ID and password by E-mail. Detailed procedure for registering the E-mail address and for receipt of e-voting user ID and password and the manner of voting remotely or e-voting during the AGM, will be made available on the aforesaid websites.

The above documents are available for electronic inspection by the members of the Company during office hours on any working day of the Company upto the date of AGM.

(B) REMOTE E-VOTING

In compliance with the provisions of Section 108 of the Companies Act, 2013 and Rule 20 of the Companies (Management and Administration) Rules, 2014 as amended from time to time and the provisions of Regulation 44 of SEBI (Listing Obligations and Disclosure Requirements) Regulations, 2015 ("Listing Regulations") and the Secretarial Standard on General Meetings (SS-2) issued by the Institute of Company Secretaries of India, the Company is providing to its Members the facility of remote e-voting before/during the AGM in respect of the businesses to be transacted at the AGM and for this purpose the Company has appointed **KFin** for facilitating voting through electronic means.

The detailed instructions for remote e-voting are given in the notice of the 26th AGM. Members are requested to take note of the following:

a) The remote e-voting facility would be available during the following period:

Sl. No.	Details / Activity	Particulars
1.	Date and time of commencement and end of remote e-voting	Commencement: **Tuesday, September 01, 2026 at 9.00 am (IST)** Conclusion: **Thursday, September 03, 2026 till 5:00 pm (IST)**
2.	Cut-off date	**Friday, August 28, 2026**

The remote e-voting module shall be disabled for voting after 5.00 pm on Thursday, September 03, 2026.

b) Members whose name is recorded in the Register of Members or in the register of beneficial owners maintained by the depositories as on the cut-off date only shall be entitled to avail the facility of remote e-voting / e-voting during the AGM, as the case may be. Once the vote on a resolution is cast by the member, he / she shall not be allowed to change it subsequently. The members who have not cast their vote electronically, and are otherwise not barred from doing so, can exercise their voting rights through the e-voting system during the AGM. The Company will make necessary arrangements for e-voting during the AGM. Members who have cast their votes by remote e-voting prior to the meeting may also attend the AGM but they are not entitled to cast their vote again during the AGM.

c) Members who would like to express their views/ ask questions as a speaker at the meeting may pre-register themselves, by logging on to **https://emeetings.kfintech.com**, from Saturday, August 29, 2026 (from 9.00 AM IST) up to Monday, August 31, 2026 (till 5.00 pm IST). Only those members who have pre-registered themselves as a speaker will be allowed to express their views/ask questions during the AGM. The Company reserves the right to restrict the number of speakers depending on the availability of time for the AGM.

d) The instructions for attending the AGM through VC / OAVM and the manner of e-voting is provided in the Notice convening the AGM for Members who have registered their e-mail address as also for those Members who hold shares in physical form or who have not registered their e-mail address.

CS Pramod S M or in his absence CS Biswajit Ghosh, partners of M/s. BMP & Co. LLP, a Practicing Company Secretaries firm, Bengaluru, has been appointed as Scrutinizer to scrutinize the remote e-voting process before/ during the AGM in a fair and transparent manner.

Webcast facility:

Members may kindly note that the Company will provide webcast of the proceedings of AGM. Members who are entitled to participate in the AGM, can view the proceedings of AGM by logging into website of KFin i.e. https://evoting.kfintech.com/ using their e-voting login credentials.

For any query / clarification / grievance connected with VC Meeting, remote e-voting and Members who acquired shares of the Company after the date of dispatch of AGM notice and hold shares as of the cut-off date may obtain the User ID and Password by following aforementioned steps or may write an E-mail to the Company at investor.relations@aequs.com or to evoting@kfintech.com or call KFin's toll free No.: 1800 309 4001.

By Order of the Board of Directors
For Aequs Limited
Sd/-
Ravi Mallikarjun Hugar
Company Secretary & Compliance Officer
M. No.: A20823

Date: August 12, 2026
Place: Belagavi

Bandhan Bank

Bandhan Bank Limited I CIN: L67190WB2014PLC204622
Registered Office: DN 32, SEC-V, Salt Lake City, Kolkata-700091

DEMAND NOTICE

Under Section 13(2) of the Securitisation and Reconstruction of Financial Assets and Enforcement of Security Interest Act, 2002 ("Act") read with Rule 3 of the Security Interest (Enforcement) Rules, 2002 ("Rules").

Now, whereas the undersigned being the Authorised Officer of Bandhan Bank Limited under the Act and in exercise of powers conferred under Section 13 (12) read with Rule 3 of the Rules, already issued Demand Notice(s) dated below under Section 13(2) of the Act, calling upon the Borrower/Director(s)/Guarantor(s)/Mortgagor (all singularly or together referred to the "obligors")/Legal Heir(s)/Legal Representative(s), listed hereunder, to pay the amounts mentioned in the respective Demand Notice(s) within 60 days from the date of the respective Notice(s). as per the details given below. Copies of the said Notice(s) were issued by Speed Post and are available with the undersigned, and further, the said Obligor(s)/Legal Heir(s)/Legal Representative(s), may, if they so desire, collect the respective copy from the undersigned on any working day during normal office hours.

In connection with the above and due to non-service of the notice(s) for various reason, it is hereby given, once again, to the said Borrower/Director(s)/Guarantor(s)/Mortgagor to pay to Bandhan Bank Limited, within 60 days from the date of the respective Notice(s), the amounts indicated herein below against their respective names, together with further interest till the date of payment and/or realization. As security for due repayment of the loan, the following Secured Asset(s) have been mortgaged to Bandhan Bank Limited by the said Obligor(s) respectively.

Loan Account No.	Name of Obligor(s)/Legal Heir(s)/Legal Representative(s)	Total Outstanding Dues (Rs.)* as on May 31, 2026	Date of NPA	Date of Demand Notice	Description of the Movable/ Immovable Property
20500025543106 (Cash Credit)	**1. M/s. SAM Gypsum Private Limited (Borrower),** Ground Floor no. 111, Mysugar Building, J C Road, Bangalore Bangaluru Urban Karnataka 560002. **Also at** Ware house IN Thanisandra- No: 5, Shop no: 2, Tuba Layout, 1st Cross, Saraipalya, Thankisandra Main Road, Dr. Shivaram Karanth Nagar Post, Urban, Karnataka-560077. **2. Mr. Thanzil Ahmed Ishrathulla (Director/Guarantor),** S/o Late Ishrathulla, 19/a, 20 th Main, 6 th A Cross Btm Layout, 1 st Stage, Bangalore South Taverekere, Bangluru Karnataka 560029. **3. Mr. Imran Farooqi (Director/Guarantor)**S/o Fakir Mohammed, No. 38/1, 5 th Main, Maruthi layout Btm Layout 1 st stage, Near HDFC Bank, Bangalore South Dharmaram College Bangaluru Karnataka 560029. **4. Mrs. Thaiyaba Kauser (Guarantor/Mortgagor)** D/o Late Ishrathulla, #20, 1 st floor, 6 th Cross Cheluvadipalya, Dr. TCM Royan Road, Bangalore South Bangalore Karnataka 560063.	Rs.7,27,21,122.80/-	22 March 2026	10 June 2026	**Primary Security:** Pari-passu charge by way of hypothecation on the Borrower's entire current assets of the firm including stock and such other movables including book debts both present & future. **Collaterals Security:** All that piece and parcel of Land with Building Old Door No. 88, new no. 90, Sydenhams Road, Choolai, vepery , Chennai 600112, (as per property tax Door No.597 (307) Rajamuthaiah Salai (Sydenhams Road) Choolai, Chennai 600112) Comprised in Part of O.S. Nos. 1210, 1211, 1266, 1207, 1208 Part of R.S. No.1319/1 part as per patta R.S. No.1319/101, Block No.35, of C.C. No. 289, 506, 442, measuring an extent of 2286 Sq. ft., as per patta Extent 2287.33 Sq. ft., situate at **VEPERY VILLAGE** Purasawalkam Taluk, Chennai District, and Bounded on the North by:R.S.No.1319/101, belongs to Appa Rao Land, South by:R.S. No. 1319/1 Sydenhams Garden Road, East by :Sydenhams Road, West by:R.S.No.1319/2 P. Sampath Ayyer Land now occupied by Ananda Timber Depot. Within the Registration District Chennai Central and Sub Registration District of Periamet. together with (i) all present and future, buildings, structures of every description which are standing, erected or attached to the aforesaid premises or any part thereof and-all rights to use common areas and facilities and incidental thereto, together with all present and future liberties, privileges, easements and appurtenances whatsoever to the said premises or any part thereof or usually held, occupied or enjoyed therewith or expected to belong or be appurtenant thereto; and (ii) all plant and machinery attached to the earth or permanently fastened to anything attached to the earth, and such movable parts as they may comprise of.

*with further interest, additional Interest at the rate as more particularly stated in respective Demand Notice dated as mentioned above, incidental expenses, costs, charges etc. incurred till the date of payment and/or realisation. If the said obligator(s) shall fail to make payment to Bandhan Bank Limited as aforesaid, then Bandhan Bank Limited shall proceed against the above Secured Asset(s)/Immovable Property under Section 13(4) of the said Act and the applicable Rules entirely at the risk of the said Obligor(s)/Legal Heir(s)/Legal Representative(s) as to the costs and consequences.

The said Obligor(s)/Legal Heir(s)/Legal Representative(s) are prohibited under the said Act to transfer the aforesaid Secured Asset(s)/Immovable Property, whether by way of sale, lease or otherwise without the prior written consent of Bandhan Bank Limited. Any person who contravenes or abets contravention of the provisions of the Act or Rules made thereunder shall be liable for imprisonment and/or penalty as provided under the Act.

Date : 12 August 2026 - Place : Bangalore, Karnataka
Sd/- Authorised Officer, Bandhan Bank Limited

ಸಮಾಚಾರ ಸಣ್ಣದಲ್ಲ

10, 20 ರು. ಪಾಲಿಮರ್ ನೋಟಿಗೆ ಅನುಮೋದನೆ

ದೆಹಲಿ: ಪ್ರಾಯೋಗಿಕವಾಗಿ 10 ಮತ್ತು 20 ರೂಪಾಯಿ ಮುಖಬೆಲೆಯ 1 ಬಿಲಿಯನ್ (100 ಕೋಟಿ) ಪಾಲಿಮರ್ ನೋಟುಗಳನ್ನು ಪರಿಚಯಿಸಲು ಅನುಮೋದನೆ ನೀಡಲಾಗಿದೆ ಎಂದು ಕೇಂದ್ರ ಸರಕಾರ ಸಂಸತ್ತಿಗೆ ಮಂಗಳವಾರ ತಿಳಿಸಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಕೇಂದ್ರ ಮಂಡಳಿಯ ಶಿಫಾರಸಿನೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, 1934 ರ ಸೆಕ್ಷನ್ 25ರ ಅಡಿಯಲ್ಲಿ ಈ ಪ್ರಸ್ತಾವನೆಯನ್ನು ಸರಕಾರಕ್ಕೆ ಕಳುಹಿಸಲಾಗಿತ್ತು. ಕ್ಷೇತ್ರ ಪ್ರಯೋಗಗಳಿಗಾಗಿ ತಲಾ ಒಂದು ಬಿಲಿಯನ್, ಅಂದರೆ 100 ಕೋಟಿಯ 10 ಮತ್ತು 20 ರೂಪಾಯಿ ಮುಖಬೆಲೆಯ ಪಾಲಿಮರ್ ನೋಟುಗಳನ್ನು ಪರಿಚಯಿಸಲು ಹಾಗೂ ಪ್ರಯೋಗಗಳು ಯಶಸ್ವಿಯಾದ ನಂತರ ಇವುಗಳನ್ನು ನಿಯಮಿತವಾಗಿ ವಿತರಿಸಲು ಪ್ರಸ್ತಾವನೆಯಲ್ಲಿ ಕೋರಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವರು ರಾಜ್ಯಸಭೆಗೆ ಲಿಖಿತ ಉತ್ತರದ ಮೂಲಕ ತಿಳಿಸಿದ್ದಾರೆ. ಸರಕಾರವು ಈ ಪ್ರಸ್ತಾವನೆಯನ್ನು ಅಂಗೀಕರಿಸಿದೆ. ಆರ್‌ಬಿಐ ಪ್ರಕಾರ, ಈ ಪಾಲಿಮರ್ ನೋಟುಗಳನ್ನು ಈಗಿರುವ ಕಾಗದ ನೋಟುಗಳ ಜತೆಗೆ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಪ್ರಸ್ತುತ ನೋಟುಗಳ ಖರೀದಿ ಪ್ರಕ್ರಿಯೆ ಆರಂಭಿಕ ಹಂತದಲ್ಲಿದೆ ಎಂದು ಆರ್‌ಬಿಐ ತಿಳಿಸಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಹಿಮಾಲಯದ ಕುರಿತು ಸದ್ಗುರು ಫೋಟೋ ಪುಸ್ತಕ ಬಿಡುಗಡೆ

ದೆಹಲಿ: ನೇಪಾಳ ಮತ್ತು ಟಿಬೆಟ್‌ನ ಹಿಮಾಲಯ ಪರ್ವತ ಶ್ರೇಣಿಗಳ ಪ್ರವಾಸದ ವೇಳೆ ಸದ್ಗುರು ಜಗ್ಗಿ ವಾಸುದೇವ್ ಅವರನ್ನು ಭೇಟಿಯಾದ ಜನರ ಅಪರೂಪದ ಛಾಯಾಚಿತ್ರಗಳನ್ನು ಒಳಗೊಂಡ ನೂತನ ಛಾಯಾಚಿತ್ರ ಪುಸ್ತಕ 'ಡಿಸಪಿಯರಿಂಗ್ ಫೇಸಸ್ ಎ ಫೋಟೋ' ಅನ್ನು ದೆಹಲಿಯ ಇಂಡಿಯಾ ಇಂಟರ್‌ನ್ಯಾಶನಲ್ ಸೆಂಟರ್‌ನಲ್ಲಿ ಬಿಡುಗಡೆ ಮಾಡಲಾಯಿತು. ಪೆಂಗ್ವಿನ್ ಇಂಡಿಯಾ ಪ್ರಕಟಿಸಿರುವ ಈ ಪುಸ್ತಕವು ಹಿಮಾಲಯದ ಅತಿ ಎತ್ತರದ ಮತ್ತು ಸವಾಲಿನ ಭೂಪ್ರದೇಶಗಳಲ್ಲಿ ವಾಸಿಸುವ ಜನರ ಜೀವನಶೈಲಿ ಒಳಗೊಂಡಿದೆ. ಕೇಂದ್ರ ಸಚಿವ ಮನ್ಸುಖ್ ಮಾಂಡವೀಯ ಅವರ ಸಮ್ಮುಖದಲ್ಲಿ ಈ ಪುಸ್ತಕ ಬಿಡುಗಡೆಯಾಯಿತು. ನಂತರ ನಡೆದ ಸಂವಾದದಲ್ಲಿ ಸದ್ಗುರು ಹಾಗೂ ಲೇಖಕ ಆನಂದ್ ರಂಗನಾಥನ್ ಅವರು ಈ ಛಾಯಾಚಿತ್ರಗಳ ಹಿಂದಿನ ಕಥೆಗಳು ಮತ್ತು ಅನುಭವಗಳನ್ನು ಹಂಚಿಕೊಂಡರು.

ನೊಂದು ಬೆಂದಿರುವ ಸಮಾಜಕ್ಕೆ ಶಕ್ತಿ ತುಂಬುವುದು ನಮ್ಮ ಕರ್ತವ್ಯ
ಆದಿವಾಸಿಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಸರಕಾರ ಬದ್ಧ

ಒಂದು ತಿಂಗಳಲ್ಲಿ ಅಲೆಮಾರಿ, ಆದಿವಾಸಿ ಆಯೋಗ: ಸಿಎಂ

ಬೆಂಗಳೂರು: ಅಲೆಮಾರಿ ಮತ್ತು ಆದಿವಾಸಿ ಆಯೋಗ ರಚನೆ ಮಾಡಬೇಕು ಎಂದು ಸರಕಾರಕ್ಕೆ ಮನವಿ ಸಲ್ಲಿಸಿದ್ದು, ಒಂದು ತಿಂಗಳಲ್ಲಿ ರಚನೆ ಮಾಡಲಾಗುವುದು ಎಂದು ಸಿಎಂ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

ಅಂಬೇಡ್ಕರ್ ಭವನದಲ್ಲಿ ಮಂಗಳವಾರ ನಡೆದ ವಿಶ್ವ ಆದಿವಾಸಿ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ನಾವು ಮೂಲ ಆದಿವಾಸಿಗಳೇ. ಇದರಲ್ಲಿ ಯಾವುದೇ ಅನುಮಾನವಿಲ್ಲ. ನಾಗರಿಕತೆ ಬಂದು ಸೂಟು ಬೂಟು ಹಾಕಿದ್ದೇವೆ. ಹುಟ್ಟಿದಾಗ ಬಟ್ಟೆ, ಹೆಸರು, ಕುರ್ಚಿ, ಅಧಿಕಾರ ಏನೂ ಇರಲಿಲ್ಲ. ನಂತರ ಹೆಸರು ಹಾಗೂ ಎಲ್ಲವೂ ಬಂದಿದೆ. ನೀವು ಪ್ರಕೃತಿ ಜತೆಗೆ ಬದುಕುತ್ತಿದ್ದೀರಿ. ನಾವು ಎಷ್ಟೇ ದೊಡ್ಡ ವ್ಯಕ್ತಿಗಳಾದರೂ ಕೊನೆಗೆ ನಾವು ಬದುಕಲು ಬಯಸುವುದು ಪ್ರಕೃತಿ ಜೊತೆಗೆ ಎಂದರು.

ನೀವು ಪ್ರಕೃತಿ ಮಕ್ಕಳು, ಭಾಗ್ಯವಂತರು. ನೀವು ಸಾಕಷ್ಟು ಸಮಸ್ಯೆಯಲ್ಲಿ ಬದುಕುತ್ತಿದ್ದೀರಿ. ಸರಕಾರ ನಿಮ್ಮ ಬದುಕಿನಲ್ಲಿ ಬದಲಾವಣೆ ತರಲು ಶಿಕ್ಷಣ ಸೇರಿ ಅನೇಕ ಕಾರ್ಯಕ್ರಮ ನೀಡಿದೆ. ಯುಪಿಎ ಸರಕಾರದಲ್ಲಿ ಅರಣ್ಯ ಹಕ್ಕು ಕಾಯ್ದೆ ನೀಡಿದೆವು. ನನ್ನ ಕ್ಷೇತ್ರದಲ್ಲಿ ನಿಮ್ಮ ಸಮುದಾಯದ ಜನರ ಭಾವನೆ, ಬದುಕು ಶ್ರಮ ಏನು ಎಂದು ಅರಿತಿದ್ದೇನೆ. ಬೆಂಗಳೂರು ಜಿಲ್ಲೆಯಲ್ಲೂ ನಿಮ್ಮ ಜನಾಂಗ ಪರಿಶ್ರಮದಲ್ಲಿ ಬದುಕುತ್ತಿದ್ದೀರಿ. ನೀವು ಶಿಕ್ಷಣಕ್ಕೆ ಆದ್ಯತೆ ನೀಡಿ, ವಿದ್ಯಾವಂತರು, ಪ್ರಜ್ಞಾವಂತರಾಗಿ. ಆದರೆ ನಿಮ್ಮ ಮೂಲ ಕಸುಬು ಬಿಡಬೇಡಿ. ಬೇರು ಗಟ್ಟಿಯಾಗಿದ್ದಾರೆ ಮಾತ್ರ ಹಣ್ಣು ಪಡೆಯಲು ಸಾಧ್ಯ. ಇತಿಹಾಸ ಮರೆತವ ಇತಿಹಾಸ ಸೃಷ್ಟಿಸಲಾರ ಎಂದು ಅಂಬೇಡ್ಕರ್ ಹೇಳಿದ್ದಾರೆ. ನಿಮ್ಮ ಮೂಲ ತತ್ವ, ಬದುಕಿನ ಆದರ್ಶ ಮರೆಯಬೇಡಿ. ಸೂರ್ಯ ಚಂದ್ರರೆ ನಿಮಗೆ ಗಡಿಯಾರ ಎಂದು ಕವಿಮಾತು ಹೇಳಿದರು.

ನಿಮಗೆ ನೀಡಬೇಕಾದದ್ದನ್ನು ಸರಕಾರ ನೀಡಲಿದೆ. ಮಕ್ಕಳಿಗೆ ಶಿಕ್ಷಣ ಕೊಡಿಸಿ, ಬೆಳೆಸಿ. ನಿಮ್ಮ ಪರವಾಗಿ ದ್ವಾರಕನಾಥ್ ಅವರು ಮನವಿ ಮಾಡಿದ್ದಾರೆ. ನಾವು ಕಂದಾಯ ಗ್ರಾಮ ಘೋಷಿಸಿ ಹಕ್ಕುಪತ್ರ, ಮನೆ ನೀಡಿದ್ದೇವೆ. ಅಲೆಮಾರಿ ಮತ್ತು ಆದಿವಾಸಿ ಆಯೋಗ ರಚನೆಗೆ ಮನವಿ ಮಾಡಿದ್ದು, ಒಂದು ತಿಂಗಳಲ್ಲಿ ಅದಕ್ಕೆ ತೀರ್ಮಾನ ಮಾಡಲಾಗುವುದು. ಇದು ನಮ್ಮ ಸರಕಾರದ ಪ್ರಣಾಳಿಕೆ ಭಾಗವಾಗಿದೆ. ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ನನ್ನ ಗುರುಗಳು ಮಾರ್ಗದರ್ಶನ ನೀಡಿದ್ದಾರೆ ಎಂದರು.

ನಗರದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ನಡೆದ ವಿಶ್ವ ಆದಿವಾಸಿ ದಿನಾಚರಣೆ ಕಾರ್ಯಕ್ರಮದಲ್ಲಿ ಆದಿವಾಸಿ ಹೆಣ್ಣು ಮಕ್ಕಳ ಜತೆ ಸಿಎಂ ಡಿಕೆಶಿ.

> ನೊಂದು ಬೆಂದಿರುವ ಸಮಾಜಕ್ಕೆ ಶಕ್ತಿ ತುಂಬುವುದು ನಮ್ಮ ಕರ್ತವ್ಯ. ನಗರದ ವಿದ್ಯಾರ್ಥಿಗಳಿಗೆ ಮೂರು ದಿನಗಳ ಕಾಲ ಹಳ್ಳಿಗಳಲ್ಲಿ ವಾಸ ಇದ್ದು, ಅಲ್ಲಿನ ಜನರ ಬದುಕಿನ ಬಗ್ಗೆ ಪರಿಚಯಿಸಲು ತೀರ್ಮಾನಿಸಿದ್ದೇವೆ. ನೀವು ನಿಮ್ಮ ಮೂಲ ಹಾಗೂ ಆಸ್ತಿ ಬಿಟ್ಟುಕೊಡಬೇಡಿ.
> -ಡಿ.ಕೆ.ಶಿವಕುಮಾರ್, ಸಿಎಂ

ಅಗತ್ಯ ದಾಖಲೆ ಪೂರೈಕೆಗೆ ಕ್ರಮ

ಈ ಹಿಂದೆ ನೆಹರೂ ಅವರು ಆದಿವಾಸಿಗಳಿಂದ ಅಣೆಕಟ್ಟು ಉದ್ಘಾಟನೆ ಮಾಡಿಸಿದ್ದರು. ನಿಮ್ಮ ನಮ್ಮ ಸಂಬಂಧ ಭಕ್ತ ಹಾಗೂ ಭಗವಂತನ ಸಂಬಂಧ. ನಿಮಗೆ ಶಿಕ್ಷಣ, ವಸತಿ, ಭೂಮಿ, ಆಹಾರ, ಉದ್ಯೋಗ, ಗ್ಯಾರಂಟಿ ನೀಡಲು ಬದ್ಧ. ನಾವು ನಿಮಗಾಗಿ ಐದು ಗ್ಯಾರಂಟಿ ಯೋಜನೆ ನೀಡಿದ್ದೇವೆ. ಇಂತಹ ಒಂದು ಯೋಜನೆ ಬೇರೆ ಯಾವುದಾದರೂ ಸರಕಾರ ನೀಡಿತ್ತಾ? ನಿಮಗೆ ನಾವು, ನಮಗೆ ನೀವು ಆಸರೆಯಾಗಿ ಇರಬೇಕು. ನಿಮ್ಮ ಶ್ರಮಕ್ಕೆ ಗೌರವ ನೀಡಲು ನಾವು ಬದ್ಧ. ನಿಮ್ಮಲ್ಲಿ ಕೀಳರಿಮೆ ಬೇಡ, ನಿಮ್ಮ ಮೂಲ ಬದುಕನ್ನು ಹೆಮ್ಮೆಯಿಂದ ಬದುಕಿ. ಎಸ್ ಐಆರ್ ಪ್ರಕ್ರಿಯೆಯಲ್ಲಿ ನಿಮ್ಮ ಮತದಾನ ಹಕ್ಕು ಕಾಪಾಡಿಕೊಳ್ಳಿ. ನಿಮಗೆ ಜಾತಿ ಹಾಗೂ ವಾಸ ದೃಢೀಕರಣ ಪತ್ರ ನೀಡಲು ಮುಂದಾಗಿದ್ದೇವೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ರೇಣುಕಾಸ್ವಾಮಿ ಕೊಲೆ ಕೇಸ್ | ನಟ ದರ್ಶನ್ ಪರ ವಕೀಲರ ಅರ್ಜಿ ಪುರಸ್ಕಾರ

ಒಂದು ವಾರ ಮಾಫಿ ಸಾಕ್ಷಿ ಹೇಳಿಕೆ ದಾಖಲು ಬೇಡ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮಾಫಿ ಸಾಕ್ಷಿಯಾಗಲು 14ನೇ ಆರೋಪಿ ಪ್ರದೋಷ್ ರಾವ್ ಸಲ್ಲಿಸಿದ್ದ ಅರ್ಜಿಗೆ ಆಕ್ಷೇಪ ವ್ಯಕ್ತಪಡಿಸಿದ್ದ ನಟ ದರ್ಶನ್ ಪರ ವಕೀಲರು, ಒಂದು ವಾರ ಮಾಫಿ ಸಾಕ್ಷಿ ಹೇಳಿಕೆ ದಾಖಲಿಸಿಕೊಳ್ಳದಂತೆ ಮಾಡಿದ ಮನವಿಯನ್ನು 59ನೇ ಸಿಸಿಎಚ್ ನ್ಯಾಯಾಲಯ ಪುರಸ್ಕರಿಸಿದೆ.

ಪ್ರದೋಷ್‌ನನ್ನು ಮಾಫಿ ಸಾಕ್ಷಿಯಾಗಿ ಪರಿಗಣಿಸುವ ಮುನ್ನ ಸಹಆರೋಪಿಗಳ ವಾದ ಆಲಿಸಬೇಕೆಂದು ಕೋರಿ ಸಲ್ಲಿಸಿದ್ದ ಅರ್ಜಿ ಯನ್ನು ನ್ಯಾಯಾಲಯ ಸೋಮವಾರ ತಿರಸ್ಕರಿಸಿದ್ದು, ಇಂದಿಗೆ ವಿಚಾರಣೆ ಮುಂದೂಡಿತ್ತು. ವಿಚಾರಣೆಯ ವೇಳೆ ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ, ಒಂದು ವಾರದವರೆಗೂ ಮಾಫಿ ಸಾಕ್ಷಿಯಾಗಿ ಪ್ರದೋಷ್‌ಹೇಳಿಕೆ ದಾಖಲಿಸಿಕೊಳ್ಳ ದಂತೆ ತಿಳಿಸಿದೆ. ಜೈಲಿನಲ್ಲಿ ಪ್ರದೂಷ್‌ಗೆ ಭದ್ರತೆ ನೀಡಬೇಕೆಂದು ಜೈಲಾಧಿಕಾರಿಗೆ ನಿರ್ದೇಶನ ನೀಡಿದೆ.

ಮಂಗಳವಾರ ವಿಚಾರಣೆಯ ಹಿನ್ನೆಲೆಯಲ್ಲಿ ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ದರ್ಶನ್, ಪವಿತ್ರಾಗೌಡ ಹಾಗೂ ಪ್ರದೋಷ್‌ಹಾಜರಾಗಿದ್ದರು. ವಿಚಾರಣೆ ಆರಂಭವಾಗುತ್ತಿದ್ದಂತೆ ವಾದ ಮಂಡಿಸಿದ ಪ್ರದೋಷ್ ಪರ ವಕೀಲ ದಿವಾಕರ್, ನನ್ನ ಕಕ್ಷಿದಾರರು ಮಾಫಿ ಸಾಕ್ಷಿಯಾಗಲು ಅರ್ಜಿ ಸಲ್ಲಿಸಿದ್ದಾರೆ. ಪ್ರಾಸಿಕ್ಯೂಷನ್ ಸಹ ಸಮ್ಮತಿಸಿದೆ. ಕೂಡಲೇ ಅವರ ಹೇಳಿಕೆ ದಾಖಲಿಸಿಕೊಳ್ಳುವಂತೆ ಮನವಿ ಮಾಡಿದರು.

ಹತ್ಯೆ ಪ್ರಕರಣದಲ್ಲಿ ಅಪಹರಣ, ಕೊಲೆ ಹಾಗೂ ಸಾಕ್ಷ್ಯ ನಾಶ ಯತ್ನ ಎಂಬ ಮೂರು ರೀತಿಯ ಆಯಾಮಗಳಿವೆ. ಹೇಳಿಕೆ ದಾಖಲಿಸಿಕೊಳ್ಳಲು ತಡವಾದರೆ ಸಾಕ್ಷಿ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ. ಅಲ್ಲದೆ, ನ್ಯಾಯಾಂಗ ಬಂಧನದಲ್ಲಿರುವ ಕಕ್ಷಿದಾರರಿಗೆ ಸೂಕ್ತ ಭದ್ರತೆ ನೀಡಬೇಕೆಂದು ಕೋರಿದರು.

ಮಾಫಿ ಸಾಕ್ಷಿ ಅರ್ಜಿ ವಿವರ: ಪ್ರದೋಷ್11 ಪುಟಗಳ ಮಾಫಿ ಸಾಕ್ಷಿ ಅರ್ಜಿಯಲ್ಲಿ ಘಟನೆಯ ಸಂಪೂರ್ಣ ವಿವರ ದಾಖಲಿಸಿದ್ದಾನೆ. ಅರ್ಜಿಯಲ್ಲಿ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟಿ ಪವಿತ್ರಾ ಗೌಡ, ದರ್ಶನ್ ಸೇರಿದಂತೆ ಎಲ್ಲಾ ಆರೋಪಿಗಳ ಪಾತ್ರದ ಬಗ್ಗೆ ವಿವರಿಸಿದ್ದಾನೆ. ನನ್ನನ್ನು ಕ್ಷಮಿಸಬೇಕು. ಮಾಫಿ ಸಾಕ್ಷಿಯಾಗಿ ಪರಿಗಣಿಸಬೇಕು ಎಂದು ಅರ್ಜಿಯಲ್ಲಿ ಕೋರಿದ್ದಾನೆ ಎಂದು ಮೂಲಗಳು ತಿಳಿಸಿವೆ.

ದರ್ಶನ್ ಪರ ವಕೀಲರ ವಾದವೇನು?

ದರ್ಶನ್ ಪರ ವಕೀಲ ಹಸ್ಮತ್ ಪಾಷಾ, ಪ್ರದೋಷ್ ಇನ್ನೂ ಕೂಡ ಆರೋಪಿಯಾಗಿದ್ದಾನೆ. ಆತ ಇನ್ನೂ ಸಾಕ್ಷಿಯಾಗಿಲ್ಲ. ನ್ಯಾಯಾಲಯ ಅರ್ಜಿಯನ್ನು ಇನ್ನೂ ಪರಿಗಣಿಸಿಲ್ಲ. ಮಾಫಿ ಸಾಕ್ಷಿ ಹೇಳಿಕೆ ಪಡೆಯುವ ಮುನ್ನ ಸಹಆರೋಪಿಗಳ ವಾದ ಆಲಿಸಲು ಸಲ್ಲಿಸಿದ್ದ ಅರ್ಜಿ ತಿರಸ್ಕರಿಸಿರುವ ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲು ಅವಕಾಶವಿದೆ. ಒಂದು ವೇಳೆ ಹೈಕೋರ್ಟ್, ಸೆಷನ್ಸ್ ಕೋರ್ಟ್ ಆದೇಶವನ್ನು ಎತ್ತಿಹಿಡಿದರೆ ಪ್ರಕ್ರಿಯೆ ಮುಂದುವರೆಸಬಹುದು. ಅಲ್ಲಿಯವರೆಗೂ ಒಂದು ವಾರಗಳ ಸಮಯಾವಕಾಶ ನೀಡುವಂತೆ ಕೋರಿದರು. ಪ್ರತಿ-ವಾದ ಆಲಿಸಿದ ನ್ಯಾಯಾಲಯ ಒಂದು ವಾರ ಸಮಯಾವಕಾಶ ನೀಡಿ, ಪ್ರದೂಷ್‌ಗೆ ಸೂಕ್ತ ಭದ್ರತೆ ನೀಡುವಂತೆ ಜೈಲಾಧಿಕಾರಿಗಳಿಗೆ ನಿರ್ದೇಶಿಸಿತು.

ರಾತ್ರೋರಾತ್ರಿ 450 ಅಡಕೆ ಗಿಡ ನಾಶಪಡಿಸಿದ ಕಿಡಿಗೇಡಿಗಳು

ಶಿವಮೊಗ್ಗ: ರಾತ್ರೋರಾತ್ರಿ ನೂರಾರು ಅಡಕೆ ಮರಗಳನ್ನು ಕಡಿದು ಹಾಕಿರುವ ಘಟನೆ ಶಿಕಾರಿಪುರ ತಾಲೂಕಿನ ತಾಳಗುಂದ ಹೋಬಳಿ ಬಳ್ಳಿಗಾವಿ ಗ್ರಾಮದಲ್ಲಿ ನಡೆದಿದೆ.

ಬಳ್ಳಿಗಾವಿ ಗ್ರಾಮದ ಜಗದೀಶ್ ಎಂಬವರಿಗೆ ಸೇರಿದ ಸುಮಾರು 5 ವರ್ಷದ ಅಡಕೆ ಗಿಡಗಳನ್ನು ಕಡಿದು ಹಾಕಲಾಗಿದೆ. ಒಂದು ಎಕರೆಗೆ 450 ಅಡಕೆ ಗಿಡಗಳಂತೆ ಸುಮಾರು 3 ಎಕರೆ ಜಮೀನಿನಲ್ಲಿದ್ದ ಗಿಡಗಳನ್ನು ನಾಶಪಡಿಸಲಾಗಿದೆ. ಗ್ರಾಮದ ನಾಗರಾಜು, ರಾಜು, ಚಿನ್ನಪ್ಪ, ವಿರೂಪಾಕ್ಷಪ್ಪ, ಕರಿಬಸಪ್ಪ ಹಾಗೂ ಇತರರ ವಿರುದ್ಧ ಜಗದೀಶ್ ಶಿರಾಳಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಜಗದೀಶ್ ಅವರು ಸರ್ವೇ ನಂಬರ್ 105ರಲ್ಲಿ 3-15 ಭೂ ನ್ಯಾಯಮಂಡಳಿಯ ಆದೇಶದಂತೆ ಮಂಜೂರಾತಿಯಾಗಿರುವ ಜಮೀನಿನಲ್ಲಿ ಕುಟುಂಬಸಮೇತ ಅಡಕೆ ಹಾಗೂ ಭತ್ತ ಕೃಷಿ ಮಾಡುತ್ತಿದ್ದಾರೆ. 3 ಎಕರೆ 14 ಗುಂಟೆ ಜಮೀನು ನಮಗೆ ಉಳುವವನೇ ಭೂ ಒಡೆಯ ಎಂಬ ಕಾನೂನಿನಡಿ ಲಭ್ಯವಾಗಿತ್ತು. ಇದರಲ್ಲಿ 1 ಎಕರೆ ಅಡಕೆ ತೋಟ, ಉಳಿದ ಜಮೀನಿನಲ್ಲಿ ಭತ್ತ ಬೆಳೆಯುತ್ತಿದ್ದೇವೆ. ಈಗ ನಾಟಿ ಮಾಡಲಾಗಿದೆ. ಆದರೆ ಗ್ರಾಮದವರು ಇದು ದೇವರ ಜಮೀನು ಎಂದು ತಕರಾರು ತೆಗೆದುಕೊಂಡು ನಮಗೆ ಕಿರುಕುಳ ನೀಡುತ್ತಿದ್ದಾರೆ. ಉಳುವವನೇ ಭೂ ಒಡೆಯ ಕಾನೂನಿನ ಪ್ರಕಾರ ಜಮೀನು ನಮಗೆ ಲಭ್ಯವಾಗಿದೆ. ಈ ಕುರಿತು ಖಾತೆಗಾಗಿ ಕಳೆದ ತಿಂಗಳು ಶಿಕಾರಿಪುರ ತಹಸೀಲ್ದಾರ್ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದು, ಅದು ಇನ್ನೂ ಪೆಂಡಿಂಗ್ ಇದೆ. ನಮಗೆ ನ್ಯಾಯ ಒದಗಿಸಿಕೊಡಿ ಎಂದು ಜಗದೀಶ್ ಮನವಿ ಮಾಡಿದರು.

ಪಾನ್ ಮಸಾಲಾ ಪ್ಲಾಸ್ಟಿಕ್ ಪ್ಯಾಕ್ ನಿಷೇಧ

ದೆಹಲಿ: ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರವು ಪಾನ್ ಮಸಾಲಾ ಪ್ಯಾಕಿಂಗ್‌ಗೆ ಸಂಬಂಧಿಸಿದಂತೆ ನೂತನ ನಿಯಮಗಳನ್ನು ಜಾರಿಗೆ ತಂದಿದ್ದು, ಪ್ಲಾಸ್ಟಿಕ್, ಅಲ್ಯೂಮಿನಿಯಂ ಫಾಯಿಲ್ ಹಾಗೂ ಮೆಟಲೈಸ್ಡ್ ಲೇಯರ್‌ಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಆಹಾರ ಸುರಕ್ಷತೆ ಮತ್ತು ಮಾನದಂಡಗಳ (ಪ್ಯಾಕೇಜಿಂಗ್) ತಿದ್ದುಪಡಿ ನಿಯಮಗಳು-2026ರ ಅಡಿಯಲ್ಲಿ ಈ ಹೊಸ ಮಾರ್ಗಸೂಚಿಗಳನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಈ ತಿದ್ದುಪಡಿಯು ಪಾನ್ ಮಸಾಲಾ ಉತ್ಪನ್ನದ ಮೇಲಿನ ನಿಷೇಧವಲ್ಲ.

ಹೈದರಾಬಾದ್‌ನ ಸತ್ವಾರ್‌ನಲ್ಲಿ ಟ್ಯಾಂಕರ್-ಆಟೋ ರಿಕ್ಷಾ ಅಪಘಾತ

ಅಪಘಾತ: ಬೀದರ್‌ನ ಏಳು ಮಂದಿ ಸಾವು

ಹೈದರಾಬಾದ್: ಇಲ್ಲಿನ ಸಂಗಾರೆಡ್ಡಿ ಜಿಲ್ಲೆಯ ಜಹೀರಾಬಾದ್ ಮಂಡಲ್‌ನ ಸತ್ವಾರ್ ಎಂಬಲ್ಲಿ ಮಂಗಳವಾರ ಸಂಜೆ ಟ್ಯಾಂಕರ್ ಮತ್ತು ಆಟೋ ರಿಕ್ಷಾ ಅಪಘಾತಕ್ಕೀಡಾಗಿದ್ದು, ಬೀದರ್‌ನ ಏಳು ಮಂದಿ ಕೃಷಿ ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಮೃತರನ್ನು ರೇಖಾ, ಕವಿತಾ, ರೇಷ್ಮಾ, ಆಟೋ ಚಾಲಕ ದೇವದಾಸ್ ಎಂದು ಗುರುತಿಸಲಾಗಿದೆ ಇನ್ನು ಇಬ್ಬರ ಹೆಸರು ಪತ್ತೆ ಆಗಿಲ್ಲ. ನಿರ್ಮಲಾ, ನಿಕಿತಾ, ತುಳಸಮ್ಮ, ಚಂದ್ರಕಲಾ, ರಾಧಿಕಾ, ಶಿಲ್ಪಾ ಮತ್ತು ಶೋಭಾ ಎಂಬವರು ಗಾಯಗೊಂಡಿದ್ದು, ಜಹೀರಾಬಾದ್‌ನ ಏರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಪೈಕಿ ಮೂವರ ಪರಿಸ್ಥಿತಿ ಗಂಭೀರವಾಗಿ ಎಂದು ವರದಿಗಳು ಸೂಚಿಸಿವೆ.

ಮೃತರು ಬೀದರ್‌ನ ರಾಜ್‌ಗಿರಿಯ ಕೃಷಿ ಕಾರ್ಮಿಕರಾಗಿದ್ದರು. ಕೃಷಿ ಕೆಲಸ ಮುಗಿಸಿಕೊಂಡು ವಾಪಸ್ ಬರುತ್ತಿರುವಾಗ ಅಪಘಾತ ಸಂಭವಿಸಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ. ಆಟೋ ರಿಕ್ಷಾದಲ್ಲಿ ಚಾಲಕ ಸೇರಿ ಒಟ್ಟು 12 ಮಂದಿ ಪ್ರಯಾಣಿಸುತ್ತಿದ್ದರು. ಇವರಲ್ಲಿ 11 ಮಂದಿ ಮಹಿಳಾ ಕಾರ್ಮಿಕರು ಎಂಬ ಮಾಹಿತಿ ಲಭ್ಯವಾಗಿದೆ. ಸ್ಥಳೀಯರು ಹೇಳುವ ಪ್ರಕಾರ, ಇವರೆಲ್ಲರೂ ಪ್ರತಿದಿನ ಕೂಲಿ ಕೆಲಸಕ್ಕಾಗಿ ಜಹೀರಾಬಾದ್‌ಗೆ ತೆರಳುತ್ತಿದ್ದರು. ಮುನಿಪಲ್ಲಿ ಮಂಡಲದ ಬುದೇರಾದಲ್ಲಿ ಹತ್ತಿ ಕಳೆಯ ತೆಗೆಯುವ ಕೆಲಸ ಮಾಡುತ್ತಿದ್ದರು ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.

ತೆಲಂಗಾಣ ಸಿಎಂ ಸಂತಾಪ: ಸಿಎಂ ರೇವಂತ್ ರೆಡ್ಡಿ ಅವರು ಘಟನೆಗೆ ತೀವ್ರ ಆಘಾತ ವ್ಯಕ್ತಪಡಿಸಿದ್ದು, ಮೃತರ ಕುಟುಂಬಗಳಿಗೆ ಸಂತಾಪ ವ್ಯಕ್ತಪಡಿಸಿದ್ದಾರೆ. ಅಪಘಾತದಲ್ಲಿ ಗಾಯಗೊಂಡವರಿಗೆ ಉತ್ತಮ ಚಿಕಿತ್ಸೆ ಲಭ್ಯವಾಗುವಂತೆ ನೋಡಿಕೊಳ್ಳಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿರುವುದಾಗಿ ಮುಖ್ಯಮಂತ್ರಿಗಳ ಕಚೇರಿ ತಿಳಿಸಿದೆ.

ದೆಹಲಿ ನಾಯಕರಿಂದ ಸಿಎಂ ಹೈರಾಣು | ನಾಯಕರ ಮುಸುಕಿನ ಗುದ್ದಾಟ | ಆಕಾಂಕ್ಷಿಗಳ ಸಂಕಟ

ಹೈಕಮಾಂಡ್ ಅಲಕ್ಷ್ಯ: ಹಳಿತಪ್ಪಿದ ಆಡಳಿತ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ರಾಜ್ಯ ಸರಕಾರದ ನಾಯಕತ್ವ ಬದಲಾವಣೆ ನಂತರ ಮುಖ್ಯಮಂತ್ರಿ ಸೇರಿದಂತೆ ರಾಜ್ಯ ಕಾಂಗ್ರೆಸ್ ನಾಯಕರು ತೀರಾ ಹೈರಾಣಾಗಿದ್ದು, ಸದ್ಯಕ್ಕೆ ನೆಮ್ಮದಿ ಕಾಣುವ ಲಕ್ಷಣಗಳು ಕಾಣುತ್ತಿಲ್ಲ.

ದೆಹಲಿಯಲ್ಲಿರುವ ಕಾಂಗ್ರೆಸ್ ಹೈಕಮಾಂಡ್ ನಡೆ ಮತ್ತು ನಿರ್ಧಾರಗಳನ್ನು ತಂದ ತಾಪತ್ರಯಗಳಿಂದ ರಾಜ್ಯ ಕಾಂಗ್ರೆಸ್ ಸರಕಾರ ಮತ್ತು ನಾಯಕರು ತೀರಾ ಬೇಸತ್ತಿದ್ದು, ನಗುತ್ತಿದ್ದ ಪ್ರತಿಪಕ್ಷಗಳ ಮುಂದೆ ಎಡವಿ ಬಿದ್ದಂತಾಗಿದೆ, ಅಂದರೆ ಹೈಕಮಾಂಡ್ ಮಾಡಿರುವ ಹತ್ತು ಹಲವು ಯಡವಟ್ಟುಗಳಿಂದ ರಾಜ್ಯ ಕಾಂಗ್ರೆಸ್ ನಾಯಕರು ಸ್ಥಳೀಯ ಮಟ್ಟದಲ್ಲಿ ಮಾತ್ರವಲ್ಲದೆ, ರಾಜ್ಯ ನಾಯಕರಲ್ಲೇ ಪರಸ್ಪರ ವಿರೋಧಗಳನ್ನು ಎದುರಿಸುವ ಸನ್ನಿವೇಶನ ನಿರ್ಮಾಣವಾಗಿದೆ. ಅದರಲ್ಲೂ ವಿಶೇಷವಾಗಿ ಹೈಕಮಾಂಡ್ ನಾಯಕರು, ಸಂಪುಟ ರಚನೆ, ವಿಸ್ತರಣೆ ಹಾಗೂ ಖಾತೆಗಳ ಹಂಚಿಕೆ ವಿಚಾರದಲ್ಲಿ ಸ್ಟ್ರಾಂಗ್ ಎಂದು ತೋರಿಸಲು ಅನುಸರಿಸಿದ ವಿಳಂಬ ನೀತಿಯಿಂದ ಪಕ್ಷದ ವರ್ಚಸ್ಸಿಗೆ ಮತ್ತು ಆಡಳಿತ ಯಂತ್ರಕ್ಕೆ ಸಾಕಷ್ಟು ಹಾನಿಯಾಗಿದ್ದು ಇದನ್ನು ಸರಿಪಡಿಸಲು ಸದ್ಯಕ್ಕೆ ಸಾಧ್ಯವೂ ಇಲ್ಲ, ಅದಕ್ಕೆ ಸಮಯವೂ ಇಲ್ಲ ಎಂದು ಪಕ್ಷದ ಹಿರಿಯ ನಾಯಕರು ಹೇಳಿದ್ದಾರೆ.

ಹೊಸ ನಾಯಕತ್ವದೊಂದಿಗೆ ಆಡಳಿತ ಆರಂಭಿಸಿದ ಕಾಂಗ್ರೆಸ್ ಸರಕಾರ, ಅಧಿಕಾರ ಸ್ವೀಕರಿಸಿ ಮೂರು ತಿಂಗಳು ಸಮೀಪಿಸುತ್ತಿದ್ದರೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ರಾಜ್ಯ ನಾಯಕರು ದೆಹಲಿ ಮತ್ತು ಕರ್ನಾಟಕದ ಮಧ್ಯೆ ಓಡಾಟ ನಡೆಸಿರುವ ಏದುಸಿರೇ ಇನ್ನೂ ಕಡಿಮೆಯಾಗಿಲ್ಲ ಎನ್ನುವಂತಾಗಿದೆ. ಅಂದರೆ ಸಿದ್ದರಾಮಯ್ಯ ಅವರ ರಾಜೀನಾಮೆ ನಂತರ ನಾಯಕತ್ವ ಬದಲಾವಣೆ, ಸಂಪುಟ ರಚನೆ ನಂತರ ಸಂಪುಟ ವಿಸ್ತರಣೆ, ಇದೀಗ ಖಾತೆಗಳ ಹಂಚಿಕೆ... ಹೀಗೆ ನಾಯತ್ವದ ಬದಲಾವಣೆ ನಂತರ ಒಂದಲ್ಲ ಒಂದು ವಿಚಾರಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ರಾಜ್ಯ ನಾಯಕರು ದೆಹಲಿ ದಂಡಯಾತ್ರೆ ನಡೆಸುತ್ತಲೇ ಇದ್ದು, ಇನ್ನೂ ಪೂರ್ಣ ಪ್ರಮಾಣದ ಆಡಳಿತವನ್ನು ಆಡಳಿತಯಂತ್ರದ ಹಳಿಗೆ ತರಲಾಗುತ್ತಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ.

ಇದರಿಂದ 19 ಹೊಸ ಸಚಿವರು ಖಾತೆ ತಿಳಿಯದೆ, ಗೊಂದಲಕ್ಕೀಡಾಗಿದ್ದರೆ, ಮುಖ್ಯಮಂತ್ರಿಗಳು ಹೈಕಮಾಂಡ್ ಮಾಡಿರುವ ಯಡವಟ್ಟುಗಳನ್ನು ಸರಿಪಡಿಸಲು ಪರದಾಡುವಂತಾಗಿದೆ. ಹೀಗಾಗಿ ಮುಖ್ಯಮಂತ್ರಿ ಅವರೀಗ ಇತ್ತ ಸಚಿವ ಸ್ಥಾನ ವಂಚಿತರನ್ನು ಸಮಾಧಾನಿಸುವುದೋ ಅಥವಾ ಹೈಕಮಾಂಡ್ ಯಡವಟ್ಟಿನಿಂದ ಮಂತ್ರಿಸ್ಥಾನ ಪಡೆದವರನ್ನು ರಾಜೀನಾಮೆ ಕೊಡಿಸುವುದೋ ಎನ್ನುವುದರಲ್ಲೇ 10 ದಿನ ಕಳೆದಿದ್ದಾರೆ. ಮೇಲ್ನೋಟಕ್ಕೆ ಇದು ಮುಖ್ಯಮಂತ್ರಿ ಮತ್ತು ಮಾಜಿ ಮುಖ್ಯಮಂತ್ರಿ ನಡುವಿನ ಮುನಿಸು ಕಾರಣ ಎನ್ನುವಂತೆ ಕಂಡರೂ ವಾಸ್ತವದಲ್ಲಿ ಹೈಕಮಾಂಡ್ ಮಾಡಿರುವ ಯಡಮಟ್ಟಿನ ನಿರ್ಧಾರಗಳೇ ಕಾರಣ ಎನ್ನಲಾಗಿದೆ, ಅಂದರೆ ಮುಖ್ಯಮಂತ್ರಿ ಸೇರಿದಂತೆ ರಾಜ್ಯ ನಾಯಕರ ಬೇಡಿಕೆಗಳಿಗೆ ದೆಹಲಿಯ ನಾಯಕರು ಸರಿಯಾಗಿ ಮತ್ತು ಸರಿಯಾದ ಸಮಯಕ್ಕೆ ಸ್ಪಂದಿಸುತ್ತಿಲ್ಲ. ಹೀಗಾಗಿ ಇಷ್ಟೆಲ್ಲಾ ಸಮಸ್ಯೆಗಳು ಉಲ್ಬಣವಾಗುತ್ತಿವೆ ಎಂದು ಕಾಂಗ್ರೆಸ್ ಹಿರಿಯ ನಾಯಕರು ಬೇಸರ ವ್ಯಕ್ತಪಡಿಸಿದ್ದಾರೆ.

ಹೈಕಮಾಂಡ್ ಎಡವಿದ್ದು ಎಲ್ಲೆಲ್ಲಿ?

- ನಾಯಕತ್ವ ಬದಲಾವಣೆ ವಿಚಾರದಲ್ಲಿ ಹಾಲಿ ಮತ್ತು ಮಾಜಿಗಳನ್ನು ಒಟ್ಟಿಗೆ ಸೇರಿಸಿ ಚರ್ಚಿಸಿ ಅಧಿಕಾರ ಹಸ್ತಾಂತರ ಸುಗಮಗೊಳಿಸದಿರುವುದು.
- ಸಂಪುಟ ರಚನೆ ಸಂದರ್ಭದಲ್ಲೇ ಸಂಪುಟಕ್ಕೆ ಬರೀ ಹಳೇ ಸಚಿವರನ್ನೇ ತುಂಬಿಕೊಂಡಿದ್ದು, ನಾಯಕತ್ವ ಬದಲಾವಣೆಯಲ್ಲಿ ಕೆಲವೇ ಮಂದಿಗೆ ಸಂಪುಟದಲ್ಲಿ ಅವಕಾಶ ನೀಡಿ ಉಳಿದ ಅರ್ಹರನ್ನು ದೂರ ಇಟ್ಟಿದ್ದು,
- ಸಂಪುಟ ರಚನೆ ನಂತರ ವಿಸ್ತರಣೆಗೆ 2 ತಿಂಗಳ ಕಾಲ ಅನಗತ್ಯ ವಿಳಂಬ ಮಾಡಿದ್ದು, ಆ ಮೂಲಕ ಅಸಮಾಧಾನಕ್ಕೆ ದಾರಿ ಮಾಡಿದ್ದು
- ಸಂಪುಟ ವಿಸ್ತರಣೆ ವೇಳೆ ರಾಜ್ಯ ನಾಯಕರನ್ನು ದೆಹಲಿಗೆ ಕರೆಸಿ ಯಾರಿಗೆ ಮಂತ್ರಿ ನೀಡಬೇಕೆಂದು ಚರ್ಚಿಸದೆ ವಾಪಸ್ ಕಳುಹಿಸಿದ್ದು
- ಮಂತ್ರಿಗಳನ್ನು ಸಂಪುಟದಿಂದ ಕೈ ಬಿಡುವ ಮುನ್ನ ಅವರ ಕಾರ್ಯವೈಖರಿಯನ್ನು ಮೌಲ್ಯ ಮಾಪನ ಮಾಡಿ ನಂತರ ಅವರನ್ನು ತೆಗೆಯದಿರುವುದು.
- ಕಾರಣವಿಲ್ಲದೆ ಹಿರಿಯ ಸಚಿವರನ್ನು ಕೈ ಬಿಟ್ಟು, ಅವರೆಲ್ಲಾ ರಾಜೀನಾಮೆ ಸಲ್ಲಿಸಿದರೆ ಅಂಗೀಕರಿಸಿ ಎನ್ನುವ ಸಂದೇಶ ರವಾನಿಸಿದ್ದು
- ಸಂಪುಟ ವಿಸ್ತರಣೆ ವೇಳೆ ಪ್ರಮಾಣ ವಚನ ಸ್ವೀಕರಿಸುವ ಸಚಿವರ ಪಟ್ಟಿಯಲ್ಲಿ ಕೊನೆ ಕ್ಷಣದ ಬಲಾವಣೆ ಮಾಡಿದ್ದು,
- ಎರಡನೇ ಹಂತದ ಪ್ರಮಾಣ ವಚನ ವೇಳೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗೈರುಹಾಜರಿಯನ್ನು ಅಲಕ್ಷ್ಯ ಮಾಡಿದ್ದು
- ಇದೆಲ್ಲಕಿಂತ ಮುಖ್ಯವಾಗಿ 19 ಸಚಿವರು ಪ್ರಮಾಣ ವಚನ ಪಡೆದು 9 ದಿನಗಳಾದರೂ ಖಾತೆ ಹಂಚಿಕೆ ಮಾಡದಿರುವುದು.

ಅಧಿವೇಶನ ನಂತರ ಆತಂಕ ಶುರು

ಅಧಿವೇಶನಕ್ಕೆ ಮುನ್ನವೇ ಸಭಾಪತಿ ರಾಜೀನಾಮೆ, ಉಪ ಸಭಾಪತಿ, ಉಪ ಸಭಾಧ್ಯಕ್ಷರ ಘೋಷಣೆಯಂಥ ಅಸಂಪ್ರದಾಯಕ ನಡೆಗಳನ್ನು ಅನುಸರಿಸಿ ಟೀಕೆಗೆ ಗುರಿಯಾಗಿದ್ದು, ಇತ್ತ ತನ್ನೊಳಗಿನ ಮಾಜಿ ಸಚಿವರು, ಶಾಸಕರ ಅಸಮಾಧಾನ ಹಾಗೂ ನೂತನ ಸಚಿವರ ಖಾತೆ ರಗಳೆಗಳಿಂದ ಕಾಂಗ್ರೆಸ್ ಹೊಸ ನಾಯಕತ್ವದ ಆಡಳಿತ ಸುಸ್ತಾಗಿ ಹೋಗಿದೆ. ಇದರ ಮಧ್ಯೆ, ತಮಿಳುನಾಡಿಗೆ ಕಾವೇರಿಯಿಂದ 12ಸಾವಿರ ಕ್ಯೂಸೆಕ್ ನೀರು ಹರಿಸಬೇಕೆಂದು ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶಿಸಿರುವುದು, ಬಿಡದಿ ಯೋಜನೆ ವಿರುದ್ಧ ಹೋರಾಟಗಳು, ಬೆಂಗಳೂರಿನಲ್ಲಿ ರಸ್ತೆಗಳ ದುರಾವಸ್ಥೆ, ಗುಂಡಿಗಳು, ಫುಟ್‌ಪಾತ್ ತೆರವು, ಖಾಲಿ ನಿವೇಶನಗಳಿಗೆ ತೆರಿಗೆ, ಬರ ಪರಿಹಾರ ಕೈಗೊಳ್ಳದಿರುವುದು ಸೇರಿದಂತೆ ಹತ್ತುಹಲವು ವಿಚಾರಗಳು ಕಾಂಗ್ರೆಸ್ ಗೆ ದೊಡ್ಡ ತಲೆನೋವಾಗಿದೆ. ಇದೆಲ್ಲದ ಮಧ್ಯೆ, ವಿಧಾನಮಂಡಲ ಅಧಿವೇಶನದ ನಂತರ ಇನ್ನೂ ನಾಲ್ಕು ಸಚಿವರನ್ನು ಸಂಪುಟದಿಂದ ಕೈ ಬಿಡಲುಸಂಪುಟ ಪುನಾರಚನೆ ನಡೆಸುವ ಸಾಧ್ಯತೆ ಇದೆ ಎನ್ನುವ ಮುಖ್ಯಮಂತ್ರಿಗಳ ಸಂದೇಶ ಕೂಡ ಅನೇಕ ಸಚಿವರಲ್ಲಿ ಆತಂಕ ತಂದಿದೆ.